474 (429) ಶ್ರೀ ಸೋಮಣ್ಣ ವಿ., ಎಂಎಲ್‌ಎ (ಬಿನ್ನಿಪೇಟೆ) :- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಪ್ರದೇಶಗಳಲ್ಲಿ ಕಳೆದ ಒಂದು ವರ್ಷದಿಂದ ಬೀದಿ ನಾಯಿಗಳಿಂದ ಅಸು ನೀಗಿದ ಮಕ್ಕಳು ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು;

ಆ) ನಗರದಲ್ಲಿ ಬೀದಿ ನಾಯಿಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಬೀದಿ ನಾಯಿಗಳಿಂದ ಅಸುನೀಗಿದ ಮಕ್ಕಳ ಕುಟುಂಬಗಳಿಗೆ ಹಾಗೂ ಗಾಯಗೊಂಡವರಿಗೆ ಸರ್ಕಾರ ನೀಡಿದ ಪರಿಹಾರವೆಷ್ಟು;

ಈ) ಬೀದಿ ನಾಯಿಗಳನ್ನು ಹಿಡಿದು ಅವುಗಳಿಗಾಗಿಯೇ ವಿಶೇಷ ದೊಡ್ಡಿಗಳನ್ನು ನಿರ್ಮಿಸಲಾಗಿದೆಯೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಯವರು) :

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಿಂದ ಬೀದಿ ನಾಯಿಗಳ ದಾಳಿಯಿಂದ ಎರಡು ಮಕ್ಕಳು ಮತ್ತು ರೇಬೀಸ್‌ನಿಂದ ಎರಡು ಮಕ್ಕಳು ಅಸು ನೀಗಿರುತ್ತಾರೆ ಹಾಗೂ ಗಾಯಗೊಂಡವರ ಸಂಖ್ಯೆ 27,366.

ಆ) ಬೀದಿನಾಯಿಗಳಿಂದ ನಾಗರೀಕರನ್ನು ರಕ್ಷಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಎ.ಬಿ.ಸಿ. ನಿಯಮಗಳು, 2001ರ ಪ್ರಕಾರ ನಾಯಿಗಳ ಸಂತಾನ ಹರಣ ಕಾರ್ಯಕ್ರಮವನ್ನು ತ್ವರಿತಗೊಳಿಸಿರುತ್ತದೆ. ಎ.ಬಿ.ಸಿ. ಕಾರ್ಯಕ್ರಮದ ಉಸ್ತುವಾರಿ ಮಾಡಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಉಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ.

ಇ) ಬೀದಿನಾಯಿ ಕಚ್ಚಿ/ರೇಬಿಸ್‌ನಿಂದ ಅಸುನೀಗಿದ 4 ಮಕ್ಕಳ ಕುಟುಂಬಗಳಿಗೆ ರೂ.2,65,000/- ಪರಿಹಾರ ನೀಡಲಾಗಿದೆ. ಬೀದಿ ನಾಯಿಗಳಿಂದ ತೀವ್ರವಾಗಿ ಗಾಯಗೊಂಡವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.15,000/- ಪರಿಹಾರ ನೀಡಲಾಗಿದೆ.

ಈ) ಇಲ್ಲ.

475 (430) ಶ್ರೀ ಸೋಮಣ್ಣ ವಿ., ಎಂಎಲ್‌ಎ (ಬಿನ್ನಿಪೇಟೆ) :- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಬೀದಿ ನಾಯಿಗಳ ಗಣತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಇಲ್ಲಿಯವರೆಗೆ ಎಷ್ಟು ಬೀದಿ ನಾಯಿಗಳು ಪತ್ತೆಯಾಗಿವೆ;

ಈ) ಈ ಗಣತಿಯಿಂದ ಆಗತಕ್ಕ ಪ್ರಯೋಜನಗಳೇನು;

ಉ) ಇದಕ್ಕಾಗಿ ಒಟ್ಟು ಎಷ್ಟು ಹಣ ಖರ್ಚಾಗಲಿದೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಡಾ॥ ಎಂ.ಕೆ. ಸುದರ್ಶನ್‌ರವರ ನೇತೃತ್ವದಲ್ಲಿನ ಸಮಿತಿ ನೀಡಿದ ಎ.ಬಿ.ಸಿ. ಕಾರ್ಯಕ್ರಮದ ಕಾರ್ಯಾಧಾರಿತ ವರದಿಯ ಶಿಫಾರಸ್ಸಿನ ಮೇರೆಗೆ ಗಣತಿ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.

ಇ) 1,85,714

ಈ) ಈ ಗಣತಿಯಿಂದ ವೈಜ್ಞಾನಿಕ ರೀತಿಯಲ್ಲಿ ಕರಾರುವಕ್ಕಾಗಿ ಎ.ಬಿ.ಸಿ ಕಾರ್ಯಕ್ರಮದ ಮುಖಾಂತರ ಬೀದಿನಾಯಿಗಳ ಸಂತತಿಯನ್ನು ಕಡಿಮೆ ಮಾಡುವುದರ ಮೂಲಕ ಬೀದಿನಾಯಿಗಳ ಹಾವಳಿಯನ್ನು ನಿಯಂತ್ರಿಸಬಹುದು.

ಉ) ರೂ. 33.00 ಲಕ್ಷಗಳು.

477 (432) ಶ್ರೀ ಸೋಮಣ್ಣ ವಿ., ಎಂಎಲ್‌ಎ (ಬಿನ್ನಿಪೇಟೆ) :– ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ರಸ್ತೆಯಲ್ಲಿ ಹೊಸದಾಗಿ ಮೇಲು ಸೇತುವೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗಿದೆ; (ಗಾಳಿ ಆಂಜನೇಯ ದೇವಸ್ಥಾನದ ಹಿಂಭಾಗದಲ್ಲಿ);

ಆ) ಇದರ ಅಂದಾಜು ವೆಚ್ಚವೆಷ್ಟು;

ಇ) ಈ ಕಾಮಗಾರಿಯ ಇತ್ತೀಚಿನ ಪ್ರಗತಿ ಏನು;

ಈ) ಈ ಕಾಮಗಾರಿ ಯಾವಾಗ ಪೂರ್ಣಗೊಳ್ಳುವುದು;